**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ.ನಂಃ 33/ 2023**

**ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 03.03.2025.**
**ಮುಂದುವರೆದ ಪಾಟೀಸವಾಲುಃ ಆಪಾದಿತರ ಪರ ಶ್ರೀ ಟಿ.ಎಂ.ಎ ವಕೀಲರಿಂದಃ**

1. ಘಟನೆ ಸಂಬಂಧ ನಮ್ಮ ತನಿಖಾಧಿಕಾರಿಗಳಿಗೆ ನನ್ನ ಹೇಳಿಕೆಯನ್ನು ನೀಡಿದ್ದು, ದಿನಾಂಕ ನೆನಪಿಲ್ಲ. ನಾನು ಹೇಳಿಕೆ ನೀಡುವ ಸಂದರ್ಭದಲ್ಲಿ ನನ್ನ ಜೊತೆ ಯಾರು ಇರಲಿಲ್ಲ. ನಾನು ಹೇಳಿಕೆ ನೀಡುವ ಸಂದರ್ಭದಲ್ಲಿ ತನಿಖಾಧಿಕಾರಿಗಳು ಹಾಗೂ ಅವರ ಸಹಾಯಕರು ಹಾಜರಿದ್ದರು. ನಾನು ಘಟನೆಯಿಂದಾದ ಗಾಯದಿಂದ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ, ಬದಲಾಗಿ ಪ್ರಥಮ ಚಿಕಿತ್ಸೆಯಾಗಿರುತ್ತದೆ. ಸಾಕ್ಷಿಯು ಮುಂದುವರೆದು ಚಿಕಿತ್ಸೆ ಸಂದರ್ಭದಲ್ಲಿ ವೈದ್ಯರು ಮುಂದುವರೆದ ಚಿಕಿತ್ಸೆಗಾಗಿ ಮೂಳೆ ತಜ್ಞರಿಗೆ ಸೂಚಿಸಿರುತ್ತಾರೆ. ಮೂಳೆ ತಜ್ಞರಿಗೆ ಸೂಚಿಸಿದ್ದರ ಸಂಬಂಧ ದಾಖಲೆಗಳನ್ನು ನಾನು ತನಿಖಾಧಿಕಾರಿಗಳಿಗೆ ನೀಡಿಲ್ಲ ಎಂದರೆ ಸಾಕ್ಷಿಯು ಸಂಬಂಧಪಟ್ಟ ವೈದ್ಯಾಧಿಕಾರಿಗಳೇ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ವೈದ್ಯಾಧಿಕಾರಿಗಳು ನನಗೆ ಮುಂದುವರೆದ ಚಿಕಿತ್ಸೆಗಾಗಿ ಯಾವುದೇ ತಜ್ಞರಿಗೆ ಸೂಚಿಸಿಲ್ಲ ಎಂದರೆ ಸರಿಯಲ್ಲ.

2. ಆರೋಪಿಯು ನನ್ನ ಬಲಗೈ ಗೆ ಎಂ.ಓ 1 ರ ದೊಣ್ಣೆಯಲ್ಲಿ ಬಲವಾಗಿ ಒಂದು ಏಟನ್ನು ಹೊಡೆದಿರುತ್ತಾರೆ. ಆ ಸಮಯಕ್ಕೆ ನನ್ನ ಬಲಗೈಯಲ್ಲಿ ರಕ್ತ ಬಂದಿರುತ್ತದೆ. ರಕ್ತವು ನೆಲಕ್ಕೆ ಬೀಳುವಷ್ಟು ಬರಲಿಲ್ಲ. ಎಂ.ಓ 1 ರ ದೊಣ್ಣೆಗೆ ರಕ್ತದ ಕಲೆಯಾಗಿರುವುದಿಲ್ಲ ಕಾರಣ, ಎಂ.ಓ 1 ರ ದೊಣ್ಣೆಯಲ್ಲಿ ನನಗೆ ಬಿದ್ದದ್ದು ಒಂದೇ ಏಟು. ನಾನು ಆಸ್ಪತ್ರೆಗೆ ಚಿಕಿತ್ಸೆ ಪಡೆದುಕೊಳ್ಳಲು ಹೋದಂತಹ ಸಂದರ್ಭದಲ್ಲಿ ಸದರಿ ಘಟನೆಯು ಯಾರಿಂದ ಆಯಿತು ಎಂಬುದರ ಮಾಹಿತಿಯನ್ನು ನೀಡಿರುತ್ತೇನೆ. ವೈದ್ಯರ ಮುಂದೆ ಇಂತಹ ಆರೋಪಿಯಿಂದಲೇ ನನಗೆ ಹಲ್ಲೆ ಆಯಿತು ಎಂಬುದನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಎಂ.ಓ 2 ಶರ್ಟನ್ನು ಘಟನೆಗೂ ಸುಮಾರು 1 ವರ್ಷದ ಹಿಂದೆ ಹೊಲೆಸಿದ್ದು.

3. ಪೊಲೀಸ್ ಸಮವಸ್ತ್ರವನ್ನು ಉಪಯೋಗಿಸಿದ ನಂತರ ಅದನ್ನು ವಾಪಸ್ ಇಲಾಖೆಗೆ ಜಮಾವಣೆ ಮಾಡಬೇಕು ಎಂದರೆ ಸಾಕ್ಷಿಯು ಈ ಸಂಬಧ ಯಾವುದೇ ನಿಯಮಗಳಿಲ್ಲ ಎಂದು ನುಡಿಯುತ್ತಾರೆ. ಪೊಲೀಸ್ ಸಮವಸ್ತ್ರವನ್ನು ನಮ್ಮ ಇಲಾಖೆಯಿಂದ ಹೊಲೆಸುವ ವೆಚ್ಚದ ಸಮೇತ ನೀಡಲಾಗುತ್ತದೆ ಅದನ್ನು ನಾವು ಹೊಲೆಸಿಕೊಳ್ಳುತ್ತೇವೆ. ಸಮವಸ್ತ್ರವನ್ನು ಹಾಸನದ ಸನ್ ಮೂನ್ ಟೈಲರ್ ಹತ್ತಿರ ಹೊಲೆಸಿರುತ್ತೇನೆ. ಎಂ.ಒ 2 ರ ಶರ್ಟ್ ನಲ್ಲಿ ಕರ್ನಾಟಕ ಪೊಲೀಸ್ ಎಂದು ನಮೂದಾಗಿರುವ 7 ಗುಂಡಿಗಳು ಇರಬೇಕು ಆದರೆ, 7 ಗುಂಡಿಗಳು ಇಲ್ಲ ಎಂದರೆ ಸಾಕ್ಷಿಯು ಅವುಗಳು ಗಲಾಟೆಯ ಸಮಯದಲ್ಲಿ ಕಿತ್ತುಹೋಗಿರುತ್ತವೆ ಎಂದು ನುಡಿಯುತ್ತಾರೆ. ಗುಂಡಿಗಳು ಕಿತ್ತುಹೋದ ಸಂಬಂಧ ತನಿಖಾಧಿಕಾರಿಗಳಿಗೆ ಹೇಳಿಕೆಯಲ್ಲಿ ತಿಳಿಸಿಲ್ಲ ಎಂದರೆ ಸರಿ.

4. ಎಂ.ಒ 1 ರ ಶರ್ಟ್ ನ ಉಳಿದ ಗುಂಡಿಗಳಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಎಂದು ನಮೂದಾಗಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಜೇಬಿನ ಗುಂಡಿಯ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ಎಂ.ಒ 2 ರ ಸಮವಸ್ತ್ರವನ್ನು ನಮ್ಮ ತನಿಖಾಧಿಕಾರಿಗಳ ಕೋರಿಕೆ ಮೇರೆಗೆ ಸೃಷ್ಟಿ ಮಾಡಿಕೊಂಡು ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಂ.ಒ 2 ರ ಶರ್ಟನ್ನು ಕರ್ನಾಟಕ ರಾಜ್ಯ ಪೊಲೀಸ್ ಅಧಿನಿಯಮದ ಪ್ರಕಾರ ರಚಿಸಿಲ್ಲ ಎಂದರೆ ಸರಿಯಲ್ಲ. ಎಂ.ಒ 1 ರ ದೊಣ್ಣೆಯು 3 ಅಡಿ ಉದ್ದವಿರುತ್ತದೆ. ಎಂ.ಒ 1 ರ ದೊಣ್ಣೆಗಳು ಸಮಾನ್ಯವಾಗಿ ಎಲ್ಲ ಕಡೆ ಸಿಗುತ್ತದೆ ಎಂದರೆ ಎಂ.ಒ 1 ರ ದೊಣ್ಣೆಯಲ್ಲಿಯೇ ನನಗೆ ಹಲ್ಲೆಯಾಗಿದೆ ಎಂದು ನುಡಿಯುತ್ತಾರೆ.

5. ಎಂ.ಒ 2 ರ ಸಮವಸ್ತ್ರವು ಸಹ ಸಾಮಾನ್ಯವಾಗಿ ಮಾರ್ಕೆಟ್ ನಲ್ಲಿ ಸಿಗುತ್ತದೆ ಎಂದರೆ ಸರಿಯಲ್ಲ. ನಾನು ಕರ್ತವಕ್ಕೆ ನೇಮಕವಾಗಿದ್ದರ ಬಗ್ಗೆ ಯಾವುದೇ ಲಿಖಿತ ದಾಖಲೆಯನ್ನು ನಮ್ಮ ತನಿಖಾಧಿಕಾರಿಗಳಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಆರೋಪಿಗೆ ಸೇರಿದ ಒಂದೇ ಮನೆ ಇರುತ್ತದೆ. ಆರೋಪಿಯ ಮನೆಯಲ್ಲಿ ಯಾರ್ಯಾರಿದ್ದರು ಎಂಬುದನ್ನು ನಾನು ಗಮನಿಸಲಿಲ್ಲ. ಕೃತ್ಯ ನಡೆದ ಸ್ಥಳದ 20 ಅಡಿ ಅಂತರದಲ್ಲಿ ಶುಭ ಎಂಬುವವರ ಮನೆ ಇದೆ

ಎಂದರೆ ಘಟನೆ ಸಮಯದಲ್ಲಿ ಕತ್ತಲಾಗಿದ್ದರಿಂದ ಗಮನಿಸಿರುವುದಿಲ್ಲ. ಘಟನೆ ಸ್ಥಳದಿಂದ 35 ಅಡಿ ದೂರದಲ್ಲಿ ರಾಮಶರ್ಮ ಭಟ್ ಎಂಬುವವರ ಮನೆ ಇರುತ್ತದೆ ಎಂದರೆ ನನಗೆ ಕಂಡಿರುವುದಿಲ್ಲ. ಅದೇ ರೀತಿ ಘಟನೆ ಸ್ಥಳದಿಂದ 40 ಅಡಿ ಎತ್ತರದಲ್ಲಿ ವಲ್ಲಿ ಡಿಕುನ್ಹಾ ರವರ ಮನೆ ಹಾಗೂ ಗದ್ದೆ ಇರುತ್ತದೆ ಎಂದರೆ ನನಗೆ ಕಂಡಿರುವುದಿಲ್ಲ. ಅದೇ ರೀತಿ ಶೇಖರ್ ಎಂಬುವವರ ಮನೆ 45 ಅಡಿ, ಕಿರಣ್ ಎಂಬುವವರ ಮನೆ 50 ಅಡಿ ಅಂತರದಲ್ಲಿರುತ್ತದೆ ಎಂದರೆ ಕಂಡಿರುವುದಿಲ್ಲ.

6. ಗಲಾಟೆ ನಡೆದಂತಹ ಸಂದರ್ಭದಲ್ಲಿ ನಾನು, ಚಾಸಾ-1, 3 ಹಾಗೂ 4 ರವರು ಮತ್ತು ಆರೋಪಿ ಇದ್ದೆವು. ಆ ಸಮಯದಲ್ಲಿ ಅಲ್ಲಿ ಆರೋಪಿ ಇರಲಿಲ್ಲ, ಒಂದು ವೇಳೆ ಆತ ಅಲ್ಲಿ ಇದ್ದಿದ್ದರೆ ಆತನನ್ನು ಬಂಧಿಸುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಘಟನೆ ಸಮಯಕ್ಕೆ ಕಾರಿನ ಸಂಖ್ಯೆ ಕೆಎ-13-ಜಿ-3535 ಕರ್ತವ್ಯಕ್ಕೆ ನಿಯೋಜನೆ ಆಗಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ದಿಃ 07.11.2021 ರಂದು ನಿಸ್ತಂತುವಿನ ಮೂಲಕ ನಮಗೆ ಯಾವುದೇ ಮಾಹಿತಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು ಆರೋಪಿಯು ಗಲಾಟೆ ಮಾಡಿದ್ದರ ಬಗ್ಗೆ ಯಾವುದೇ ಮಾಹಿತಿಯನ್ನು ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಗಲಾಟೆ ಸಮಯಕ್ಕೆ ನಾನು ಆರೋಪಿಯನ್ನು ವಿಚಾರಿಸಿಯೇ ಇಲ್ಲ ಎಂದರೆ ಸರಿಯಲ್ಲ.

7. ಆರೋಪಿಯು ಚಾಸಾ-3 ರವರಿಗೆ ದೊಣ್ಣೆಯಿಂದ ಯಾವುದೇ ಹಲ್ಲೆ ಮಾಡಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಚಾಸಾ-1 ರವರಿಗೂ ಸಹ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-3 ಹಾಗೂ 4 ರವರು ನನ್ನನ್ನು ಘಟನೆಯಿಂದಾದ ಹಲ್ಲೆಯಿಂದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಎಂ.ಓ 2 ರ ವಸ್ತುವನ್ನು ಅಮಾನತು ಪಡಿಸಿಕೊಳ್ಳುವುದಕ್ಕೂ ಮೊದಲು ಅದು ನನ್ನ ವಶದಲ್ಲಿಯೇ ಇತ್ತು. ಎಂ.ಓ 2 ರ ಸಮವಸ್ತ್ರವು ನನ್ನ ವಶದಲ್ಲಿಯೇ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಮಹಜರ್ ಕ್ರಮವನ್ನು ನಮ್ಮ ತನಿಖಾಧಿಕಾರಿಗಳ ಸಹಾಯಕರು ಬರೆದಿರುತ್ತಾರೆ. ನಿಪಿ-4 ರ ಮಹಜರ್ ಕ್ರಮವನ್ನು ಸಂಜೆ

5.30 ರಿಂದ 6 ರವರೆಗೆ ಬರೆದಿರುತ್ತಾರೆ. ನಿಪಿ-4 ರ ಮಹಜರ್ ಕ್ರಮಕ್ಕೆ ಪಂಚಸಾಕ್ಷಿದಾರರಾಗಿ ಸಂದೇಶ್ ಹಾಗೂ ತೌಷಿಪ್ ಎಂಬುವವರು ಹಾಜರಿದ್ದರು. ನಿಪಿ-4 ರ ಮಹಜರ್ ಕ್ರಮವನ್ನು ನಮ್ಮ ಸಿಪಿಐ ರವರ ಕಚೇರಿಯಲ್ಲಿ ಜರುಗಿಸಲಾಗಿರುತ್ತದೆ. ನಿಪಿ-4 ರ ಮಹಜರ್ ಕ್ರಮವನ್ನು ಪಂಚರ ಸಮಕ್ಷಮ ಜರುಗಿಸಿಲ್ಲ, ಬದಲಾಗಿ ನಾವೇ ಬರೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

8. ಆರೋಪಿಯು ಯಾವತ್ತೂ ನಮ್ಮ ಕರ್ತವ್ಯಕ್ಕೆ ಅಡ್ಡಿ ಪಡಿಸಿರುವುದಿಲ್ಲ ಹಾಗೂ ನಮಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2020ನೇ ಸಾಲಿನಲ್ಲಿ ನನಗೂ ಹಾಗೂ ಆರೋಪಿಗೂ ಮರಳು ಸಾಗಣೆ ವಿಚಾರದಲ್ಲಿ ಗಲಾಟೆ ಆಗಿತ್ತು, ಅದೇ ದ್ವೇಷದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು 2020 ರಲ್ಲಿ ನಾನು ಸಕಲೇಶಪುರದಲ್ಲಿ ಕರ್ತವದಲ್ಲಿರಲಿಲ್ಲ, ಬದಲಾಗಿ ಹಾಸನದಲ್ಲಿ ಕರ್ತವ ನಿರತನಾಗಿದ್ದೆ ಎಂದು ನುಡಿಯುತ್ತಾರೆ. ಪ್ರಾಸಾ-1 ರವರ ಜೊತೆ ಸೇರಿಕೊಂಡು ಆರೋಪಿತನಿಗೆ ತೊಂದರೆ ಕೊಡಲೆಂದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.